56	Mysore Sugar Co.	19223
57	NSL Sugars (SCM)	64120
58	Pandavapura SSK Ltd.	7335
	Total	**196586**
	Mysore	
59	Bannari Amman Sugars	121948
	Total	**121948**
	Hassan	
60	Hemavathi SSK Ltd. (Leased to Chamundeshwari Sugars)	17129
	Total	**17129**
	Grand Total	**4128791**

ನಗರೋತ್ಥಾನ ಯೋಜನೆಯ ಕಾಮಗಾರಿಗಳು

1858 (1002); ಶ್ರೀ ಬಾಲಕೃಷ್ಣ ಹೆಚ್. ಸಿ. (ಮಾಗಡಿ)

ಅ) ಮಾಗಡಿ ಪಟ್ಟಣದಲ್ಲಿ ನಗರೋತ್ಥಾನ ಯೋಜನೆಯ ಹಂತ–1 ಮತ್ತು ಹಂತ–2 ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಾದರೆ, ಈ ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲಾಯಿತು;

ಇ) ಕಾಮಗಾರಿಗಳು ನಿಧಾನಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಾದರೆ, ನಿಧಾನಗತಿಯಲ್ಲಿ ನಡೆಯಲು ಕಾರಣವೇನು: ಈ ಕಾಮಗಾರಿಗಳು ಯಾವ ಹಂತದಲ್ಲಿವೆ;

ಈ) ನಗರೋತ್ಥಾನ ಯೋಜನೆಯ ಹಂತ–2 ಸ್ಥಗಿತಗೊಳ್ಳಲು ಪ್ರಾರಂಭಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು; ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು (ಸಂಪೂರ್ಣ ವಿವರ ನೀಡುವುದು)?

ಡಾ: ಖಮರುಲ್ ಇಸ್ಲಾಂ (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) ಬಂದಿದೆ.

ಆ) ನಗರೋತ್ಥಾನ ಹಂತ–1 ಯೋಜನೆಯಡಿ ಕಾಮಗಾರಿಗಳನ್ನು 2009–10 ರಲ್ಲಿ 20 ಕಾಮಗಾರಿಗಳನ್ನು ಪ್ರಾರಂಭಿಸಿದ್ದು, ಸದರಿ ಕಾಮಗಾರಿಗಳಲ್ಲಿ 19 ಕಾಮಗಾರಿಗಳು ಪೂರ್ಣಗೊಂಡಿದ್ದು, ಒಂದು ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ನಗರೋತ್ಥಾನ ಹಂತ–2 ಯೋಜನೆಯಡಿ ದಿನಾಂಕ: 12.12.2013 ರಂದು ಕಾಮಗಾರಿಗಳನ್ನು ಪ್ರಾರಂಭಿಸಲಾಗಿರುತ್ತದೆ.

ಇ) ಬಂದಿದೆ. ಕರಾರು ಮಾಡಿಕೊಂಡು ದಿನಾಂಕ: 26.06.2013ರಂದು ಕಾರ್ಯಾದೇಶ ನೀಡಲಾಗಿರುತ್ತದೆ. B.O.Q. (Bill of Quantities) ಅನ್ನು ದೃಢೀಕರಿಸದಿರುವುದರಿಂದ ನಿಧಾನವಾಗಿದೆ. ಇದನ್ನು ಸರಿಪಡಿಸಲು B.O.Q. (Bill of Quantities) ಅನ್ನು ಸಹಿಮಾಡುವಂತೆ ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ ರವರಿಗೆ ತಿಳಿಸಲಾಗಿದೆ.

ಪ್ರಸ್ತುತ 02 ಕಾಮಗಾರಿಗಳು ಪೂರ್ಣಗೊಂಡಿದ್ದು, 38 ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗಿರುತ್ತದೆ.

ಈ) ನಗರೋತ್ಥಾನ ಹಂತ–2 ಯೋಜನೆಯಡಿ ಮಾಗಡಿ ಪಟ್ಟಣದಲ್ಲಿ 02 ಕಾಮಗಾರಿಗಳು ಪೂರ್ಣಗೊಂಡಿದ್ದು, 38 ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗಿರುತ್ತದೆ.

ಗುತ್ತಿಗೆದಾರರಿಗೆ ಪೂರ್ಣಗೊಂಡಿರುವ ಕಾಮಗಾರಿಗಳ ಬಿಲ್ ಪಾವತಿಸಲು B.O.Q. (Bill of Quantities) ಅನ್ನು ದೃಢೀಕರಿಸಲು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ.

ನಿಗಧಿತ ಕಾಲಮಿತಿಯೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ.

ನಬಾರ್ಡ ಯೋಜನೆಯ ರಸ್ತೆಗಳು

1859 (1003); ಶ್ರೀ ಬಾಲಕೃಷ್ಣ ಹೆಚ್. ಸಿ. (ಮಾಗಡಿ)

ಅ) ಮಾಗಡಿ ಕ್ಷೇತ್ರ ವ್ಯಾಪ್ತಿಗೆ ನಬಾರ್ಡ ಯೋಜನೆಯಡಿಯಲ್ಲಿ ಎಷ್ಟು ರಸ್ತೆಗಳು ಮಂಜೂರಾಗಿವೆ? ಯಾವ್ಯಾವ ರಸ್ತೆಗಳು ಮಂಜೂರಾಗಿವೆ, (ವಿವರ ನೀಡುವುದು)

ಆ) ಮಂಜೂರಾಗಿರುವ ಕಾಮಗಾರಿಗಳು ಪೂರ್ಣಗೊಂಡಿವೆಯೆ; ಹಾಗಾದರೆ, ಇನ್ನೂ ಪೂರ್ಣಗೊಳ್ಳದ ಕಾಮಗಾರಿಗಳನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು?

ಇ) ಮಾಗಡಿ–ಕುಣಿಗಲ್ ರಸ್ತೆಯಿಂದ ಶಂಭಯ್ಯನಪಾಳ್ಯ ರಸ್ತೆ ಕುಂಠಿತ ಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಕುಂಠಿತ ಗೊಳ್ಳಲು ಕಾರಣವೇನು; ಯಾವ ಕಾಲಮಿತಿಯಲ್ಲಿ ರಸ್ತೆಯನ್ನು ಪೂರ್ಣಗೊಳಿಸಲಾಗುವುದು; ಸಂಪೂರ್ಣ ವಿವರ ನೀಡುವುದು?

ಡಾ: ಹೆಚ್. ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

ಅ) ಮಾಗಡಿ ಕ್ಷೇತ್ರ ವ್ಯಾಪ್ತಿಗೆ ನಬಾರ್ಡನ ಆರ್.ಐ.ಡಿ.ಎಫ್. ಯೋಜನೆಯಡಿ 2007–08ನೇ ಸಾಲಿನಿಂದ 2013–14ನೇ ಸಾಲಿನವರೆಗೆ ಒಟ್ಟು 9 ರಸ್ತೆ ಹಾಗೂ 2 ಸೇತುವೆ ನಿರ್ಮಾಣ ಕಾಮಗಾರಿಗಳು, ಮಂಜೂರಾಗಿದ್ದು, ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) ಅನುಮೋದನೆಯಾದ 11 ಕಾಮಗಾರಿಗಳ ಪೈಕಿ 7 ರಸ್ತೆ ಮತ್ತು 1 ಸೇತುವೆ ನಿರ್ಮಾಣ ಕಾಮಗಾರಿಗಳು ಪೂರ್ಣಗೊಂಡಿದ್ದು, ಒಂದು ಸೇತುವೆ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. 2013–14ರಲ್ಲಿ ಅನುಮೋದನೆಯಾದ ಆರ್.ಐ.ಡಿ.ಎಫ್–19ರಲ್ಲಿನ 2 ಕಾಮಗಾರಿಗಳಿಗೆ ಗುತ್ತಿಗೆ ನಿಗದಿಪಡಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.